ಓ ಎಸ್ ನಂಃ 34/2016
ಡಿ ಡಬ್ಲು -5

ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿನಾಂಕಃ **09.08.2021**

ಮುಖ್ಯ ವಿಚಾರಣೆಃ ಶ್ರೀ ಕೆ ಸಿ ಎಸ್ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವುದು ಸತ್ಯವಿರುತ್ತದೆ. ನಾನೆ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ.

ಈ ಕೇಸಿನಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಡಿ-12 ರಿಂದ 23 ಎಂದು ಗುರುತಿಸಲಾಗಿರುತ್ತದೆ.

ಪಾಟೀ ಸವಾಲುಃ ಶ್ರೀ ಕೆ ಬಿ ಎಂ ವಕೀಲರಿಂದ ಪ್ರತಿವಾದಿ 6 ರವರ ಪರವಾಗಿ

ನನ್ನ ಯಜಮಾನರ ಹೆಸರು ಸೋಮಣ್ಣ ಎಂದರೆ ಸರಿ. ನಾನು ಪ್ರತಿವಾದಿ 6 ರವರ ಹೆಸರಿಗೆ ದಾವಾ ಐಟಂ ನಂಃ 2 ಕ್ಕೆ ಸಂಬಂಧಿಸಿದ ಸ್ವತ್ತನ್ನು ಕ್ರಯ ಪತ್ರದ ಮುಖಾಂತರ ಕ್ರಯ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ಆ ಕ್ರಯ ಪತ್ರವನ್ನು ನಾನು ಈಗ ನೋಡುತ್ತಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಆ ಕ್ರಯ ಪತ್ರವನ್ನು ಈಗ ನಿಡಿ -35 ಎಂದು ಗುರುತಿಸಲಾಯಿತು.

ಪ್ರತಿವಾದಿ 6 ರವರು ದಾವಾ ಐಟಂ ನಂಃ 2 ಸ್ವತ್ತನ್ನು ಖರೀದಿ ಮಾಡಿದ ನಂತರ ಪ್ರತಿವಾದಿ 6 ರವರ ಹೆಸರಿನಲ್ಲಿ ಪಹಣಿ ಇರುತ್ತದೆ ಎಂದರೆ ಸರಿ. ಎಂ ಆರ್ ಪ್ರತಿಯನ್ನು ನನಗೆ ಈಗ ತೋರಿಸುತ್ತಿದ್ದು, ಅದು ಸರಿಯಿರುತ್ತದೆ ಎಂದು ಸಾಕ್ಷಿ ನುಡಿದ ಮೇರೆಗೆ ಎಂ ಆರ್ ಪ್ರತಿಯನ್ನು ನಿಡಿ-36 ಎಂದು ಗುರುತಿಸಲಾಯಿತು. ಪ್ರತಿವಾದಿ 6 ರವರು ಖರೀದಿ ಮಾಡಿದ ದಾವಾ ಐಟಂ ನಂಃ 2 ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ 6 ರವರು ದಾವಾ ಐಟಂ ನಂಃ 2 ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುವ ವಿಷಯವು ವಾದಿಗಳು ಮತ್ತು ಇತರೆ ಪ್ರತಿವಾದಿಗಳಿಗೆ ಗೊತ್ತಿರುತ್ತದೆ ಎಂದರೆ ಸರಿ.

ಓ ಎಸ್ ನಂಃ 34/2016
ಡಿ ಡಬ್ಲು -5

ದಾವಾ ಐಟಂ ನಂಃ 2 ಸ್ವತ್ತು ಕೂಡಿಗೆ ಸರ್ಕಲ್ನಿಂದ ನನ್ನ ಮಾವ ಅಂದರೆ 1 ನೇ ಪ್ರತಿವಾದಿಯವರ ತಂದೆಯ ಮನೆಗೆ ಹೋಗುವ ದಾರಿಯಲ್ಲಿ ಬರುತ್ತದೆ ಎಂದರೆ ಸರಿ. ಪ್ರತಿವಾದಿ 6 ರವರು 2003 ನೇ ಇಸವಿಯಲ್ಲಿ ದಾವಾ ಐಟಂ ನಂಃ 2 ಸ್ವತ್ತಿನಲ್ಲಿ ಕಟ್ಟಡವನ್ನು ಕಟ್ಟಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ

ವಕೀಲರು ಗೈರು ಹಾಜರು ಇರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಗಿದೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.

ಓ ಎಸ್ ನಂಃ 34/2016
ಡಿ ಡಬ್ಲು -5